(SRI M. Y. GHORPADE)

by the Deputy Commissioner, Chitradurga, to the Tahsildars in this matter. The Village Panchayat Chairman, M.L.As., M.L.Cs., M.Ps. and T.D.B. Presidents can also initiate action and recommend for the grant of old age pension.

ಶ್ರೀ ಬಿ. ಜಿ. ಬಣಕಾರ್.—ತಾವು (ಅ)ಗೆ ಉತ್ತರವಾಗಿ 286 ಅರ್ಜಿಗಳು ಇತ್ಯರ್ಥವಾಗದೆ ಉಳಿದಿರುತ್ತವೆ ಎಂದು ಹೇಳಿದ್ದೀರಿ. ಆದಷ್ಟು ಬೇಗ ಇವುಗಳನ್ನು ಇತ್ಯರ್ಥ ಮಾಡಲಿಕ್ಕೆ ಆದೇಶ ಕೊಡುತ್ತೀರಾ ?

† ಶ್ರೀ ಎಂ. ವೈ. ಘೋರ್ಪಡೆ.—ಈಗಾಗಲೇ ನಾವು ಇದಕ್ಕೆ ಸಾಕಷ್ಟು ಆದ್ಯತೆ ಕೊಟ್ಟು ಈ ಈ ಕೆಲಸಗಳನ್ನು ಮುಗಿಸಬೇಕು ಎಂದು ಹೇಳಿ ಎಷ್ಟೋ ಸಲ ಪ್ರೊಸೀಜರ್‌ನ್ನೂ ಕೂಡ ಡೀ ಸೆಂಟ್ರಲೈಸ್ ಮಾಡಿ ಕೆಲಸ ಮಾಡುವುದಕ್ಕೆ ಅಸಿಸ್ಟೆಂಟ್ ಕಮೀಷನರ್‌ಗೆ ಅಧಿಕಾರ ಇದೆ ಎಂದು ಹೇಳಿದ್ದೇವೆ. ಅದರ ಜೊತೆಗೆ ಕೆಲವರು ಅರ್ಜಿಗಳನ್ನು ಕೊಡದೆ ಹೋದರೆ, ಎಂ. ಎಲ್. ಎ. ಗಳು ಅಥವಾ ಇತರೆ ಜವಾಬ್ದಾರಿಯುತ ಜನರು ಅಂಥ ಕೇಸುಗಳನ್ನು ಅಸಿಸ್ಟೆಂಟ್ ಕಮೀಷನರ್ ಅವರ ಗಮನಕ್ಕೆ ತಂದರೆ, ತಕ್ಷಣ ವೃದ್ಧಾಪ್ಯವೇತನ ಕೊಡಬೇಕು ಎಂದು ಹೇಳಿದ್ದೇವೆ. ಈ ಕೆಲಸ ತೃಪ್ತಿಕರವಾಗಿ ನಡೆದಿದೆ ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಜಿ. ಬಣಕಾರ್.—ಎಲ್ಲಾ ತಾಲ್ಲೂಕುಗಳಲ್ಲಿಯೂ ಶ್ಯಾನುಭೋಗರುಗಳಿಗೆ ಈ ಬಗ್ಗೆ ಜನರಿಗೆ ತಿಳುವಳಿಕೆ ಕೊಡಲು ತಿಳಿಸಲಾಗಿದೆಯೆಂದು ಹೇಳಿದ್ದೀರಿ, ದಾವಣಗೆರೆ ತಾಲ್ಲೂಕು ಮತ್ತು ಇತರೆ ತಾಲ್ಲೂಕುಗಳಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಬಡ ಜನರಿಗೆ ಮತ್ತು ನಿರ್ಗತಿಕರಿಗೆ ಈ ಬಗ್ಗೆ ತಿಳುವಳಿಕೆಯನ್ನು ಕೊಟ್ಟಿಲ್ಲ, ಆದ್ದರಿಂದ ತಾವು ಈ ಬಗ್ಗೆ ಬಡ ಜನರಿಗೆ ಹಾಗೂ ನಿರ್ಗತಿಕರಿಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ತಿಳುವಳಿಕೆ ಕೊಡುವಂತೆ ಗ್ರಾಮದ ಪಟೇಲರುಗಳೂ, ತರಾಟೆಗಳಿಗೂ ಆದೇಶ ಕೊಡುತ್ತಿರಾ ?

ಶ್ರೀ ಎಂ. ವೈ. ಘೋರ್ಪಡೆ.—ಕೊಡೋಣ. ಪುನಃ ಈ ಬಗ್ಗೆ ಹೇಳೋಣ. ಈ ರಾಜ್ಯದಲ್ಲಿ ಸುಮಾರು 33 ಸಾವಿರ ಜನರಿಗೆ ವೃದ್ಧಾಪ್ಯ ವೇತನ ಬರುತ್ತಿದೆ.

SUB-CHENNELS TO HIREKATTE VODDU IN GAVAGAL HOBLI

117. Sri H. S. SIDDAPPA (Arsikere).—

Will the Minister of State for Minor Irrigation be pleased to state :—

(*a*) the cost of the construction of "Hirekattevoddu" in Javagal Hobli of Arasikere Taluk and the years in which the work was completed ;

(*b*) the length of the Channel in Arsikere taluk and the extent of land under cultivation by using this water ;

(*c*) the reasons for not taking up the digging of sub-channels even though there is repeated demand from the ryots and that large number of acreage would come under cultivation ?

Sri S. B. NAGARAL (Minister of State for Minor Irrigation).—

(*a*) The revised estimate is Rs. 26,10,000. The work has been completed during 1969-70.

---

‡ Indicates that remarks or speeches have not been revised by the member concerned.

(*b*) Eleven miles and 1619 acres and 19 guntas in Arsikere Taluk.

(*c*) The construction of field channels were not contemplated in the original sanctioned estimate and now arrangements are being made to take up the work.

ಶ್ರೀ ಎಚ್. ಎಸ್. ಸಿದ್ದಪ್ಪ.—ಹಿರೇಕಟ್ಟೆ ಒಡ್ಡಿನಲ್ಲಿ ನಿರ್ಮಾಣ ಮಾಡುವುದಕ್ಕೆ ಮುಂಚೆ ಅಂದಾಜಿನಲ್ಲಿ ಸಬ್ ಚಾನಲ್ಸ್ ಅನ್ನು ತೋಡುವುದಕ್ಕೆ ಅವಕಾಶ ಇರಲಿಲ್ಲ. ಇತ್ತೀಚೆಗೆ, ತಾವು ಈ ಬಗ್ಗೆ ಆಲೋಚನೆ ಮಾಡುತ್ತೇವೆಂದು ಹೇಳಿದ್ದೀರಿ; ಸಬ್ ಚಾನಲ್ಸ್ ಮಾಡುವುದರಿಂದ ಇನ್ನೂ ಎರಡು ಸಾವಿರ ಎಕರೆ ಸಾಗುವಳಿಯಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ, ಎಷ್ಟು ದಿವಸಗಳಲ್ಲಿ ಸಬ್ ಚಾನಲ್ಸ್ ತೆಗೆಯುವ ವ್ಯವಸ್ಥೆ ಮಾಡುತ್ತೀರಿ ?

† ಶ್ರೀ ಎಸ್. ಬಿ. ನಾಗರಾಳ್.—ಸಬ್ ಚಾನಲ್ಸ್ ತೆಗೆಯುವುದರಿಂದ ರೈತರಿಗೆ ವಿಶೇಷವಾಗಿ ಅನುಕೂಲವಾಗುತ್ತದೆ. ಅದಕ್ಕಾಗಿ ಸಬ್ ಚಾನಲ್ಸ್ ಮಾಡಬೇಕು ಎಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಮತ್ತೇ ಇದನ್ನು ಸಾಧ್ಯವಾದಷ್ಟು ಬೇಗ ತ್ವರಿತಗತಿಯಿಂದ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸಬ್ ಚಾನಲ್ ಮಾಡುವ ಸಂದರ್ಭದಲ್ಲಿ ಅನೇಕ ರೈತರ ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕಾಗುತ್ತದೆ. ಈ ಹಿಂದೆ ಮೇನ್ ಚಾನಲ್ಸ್‌ಗೆ ಜಮೀನನ್ನು ತೆಗೆದುಕೊಂಡಾಗ ಅದಕ್ಕೆ ಇನ್ನೂ ಪರಿಹಾರವನ್ನು ಕೊಟ್ಟಿಲ್ಲ. ಇದರಿಂದ ಅಲ್ಲಿ ಅಡಚಣೆ ಬರಬಹುದು. ಆದ್ದರಿಂದ ಮುಂದೆ ಸಬ್ ಚಾನಲ್‌ಗೆ ಅಡಚಣೆಗೆ ಬಾರದ ಹಾಗೆ ಹಿಂದೆ ತೆಗೆದು ಕೊಂಡಿರುವ ಜಮೀನಿಗೂ ಪರಿಹಾರ ಕೊಟ್ಟು ಇದರಿಂದ ಹೆಚ್ಚು ನೀರಾವರಿಯಾಗುವಂತೆ ಅವಕಾಶ ಮಾಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಮಾನ್ಯ ಸದಸ್ಯರು ಹೇಳಿದಕ್ಕೆಲ್ಲಾ ಗಮನಕೊಟ್ಟು ತೀವ್ರ ಗತಿಯಿಂದ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಪರಿಷ್ಕೃತ ಅಂದಾಜು ಪೂರ್ತಿಯಾದ ಮೇಲೆ ಎಷ್ಟು ಖರ್ಚು ಕಟ್ಟಿಗೆ ನೀರು ಒದಗುತ್ತದೆ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆಗೆ ನೀರಾವರಿಯಾಗುತ್ತದೆ ? ಕೆರೆಯನ್ನು ಕಟ್ಟಿ ಉಪ ಚಾನಲ್‌ಗಳನ್ನು ಪೂರ್ತಿಯಾಗಿ ಕಟ್ಟಿಲ್ಲ. ತಾವು ತಮ್ಮ ಉತ್ತರದಲ್ಲಿ ಪೂರ್ತಿಗೊಳಿಸುತ್ತೇವೆಂದು ಹೇಳಿದ್ದೀರಿ, ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ಕೆರೆಯನ್ನು ಕಟ್ಟಿದ ಉದ್ದೇಶ ಸಫಲವಾಗಿಲ್ಲ. ಆದ್ದರಿಂದ ಕೂಡಲೆ ಕೆಲಸಗಳನ್ನು ತೆಗೆದುಕೊಂಡು ಜಾಗ್ರತೆ ಮಾಡಿಸಿಕೊಡುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್.—ಈ ಕೆರೆಯ ಕೆಳಗಡೆ ನಮ್ಮ ಎಸ್ಟಿಮೇಟಿನ ಪ್ರಕಾರ 3100 ಎಕರೆ ನೀರಾವರಿಯಾಗಬೇಕು ಎನ್ನುವ ಅಂದಾಜು ಇದೆ. ಚಾನಲ್‌ಗಳನ್ನು ಕಟ್ಟುವ ದೆಸೆಯಿಂದ, ಇನ್ನೂ ಹೆಚ್ಚು ಫೀಡರ್ ಚಾನಲ್ಸ್ ಉಪಯೋಗ ಮಾಡಿಕೊಂಡು ಹೆಚ್ಚು ಎಕರೆ ನೀರಾವರಿ ಮಾಡ ಬೇಕು ಎನ್ನುವುದು ಸರ್ಕಾರದ ಅಭಿಪ್ರಾಯವಾಗಿದೆ.

INLAND FISHERIES SOCIETIES REGISTERED IN BANGALORE DISTRICT

126. Sri S. KARIAPPA (Kanakapura).—

Will the Minister of State for Fisheries and Horticulture be pleased to state :—

(a) the number of Fisheries societies registered as Inland Fisheries in Bangalore District ;

(b) the names of those Fisheries societies not working properly?